ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ವಿ॥ ಅರ್ಜೀ ನಂಬರ್ 98.

ಮೃತಪಟ್ಟ ಶೇಷಗಿರಿರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೊಡ್ಡಬಳ್ಳಾಪುರ ಮುನಿಶೇಫ್ ಮೆ॥ ವೆಂಕೋಬರಾಯರು, ಮೃತಪಟ್ಟ ಸದರೀ ಶೇಷಗಿರಿರಾಯರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಶೇಷಗಿರಿರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೆ॥ ವೆಂಕೋಬರಾಯರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೇಷಗಿರಿರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೨ —೧೯೦೩ನೇ ಇಸವಿ ಅರ್ಜೀ ನಂಬರು 245.

ಮೃತಪಟ್ಟ ಶಾಂತಮಲ್ಲಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಕೊಸಗುಣಿಮೆ ನಂಜರಾಯಪಟ್ಟಣದ ತಾಲ್ಲೂಕು ಕೊಡ್ಲಿಪೇಟೆಯಲ್ಲಿರುವ ಶಿವಾಚಾರಿಯ ಕೆಲ್ಲಪಟ್ಟ ಶಾಂತಮಲ್ಲಪ್ಪನ ಮಗಳು ಶಾಂತಮ್ಮನು ಮೃತಪಟ್ಟ ಸದರೀ ಶಾಂತಮಲ್ಲಪ್ಪನವರಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಕೊಡ್ಲಿಪೇಟೆ ಸ್ಥಳದ ಶಾಂತಮ್ಮನು, ಸದರಿ ವಾಸಸ್ಥರಾಗಿ ಮೃತಪಟ್ಟ ಶಾಂತಮಲ್ಲಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ (5,585) ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ಆಕ್ಟ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಾಂತಮ್ಮನ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾಂತಮಲ್ಲಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 259.

ಮೃತಪಟ್ಟ ಮೈಸೂರು ಸುಬ್ಬಾಯಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಹಾಸನದ ಡಿಸ್ಟ್ರಿಕ್ಟ್ ಅರಕಲ್‌ಗೂಡು ತಾಲ್ಲೂಕು ತೊಣನೂರು ಕಸಬಾದಲ್ಲಿರುವ ಮೈಸೂರು ಸುಬ್ಬಾಯಶೆಟ್ಟರ ಮಗ ರಾಮಕೃಷ್ಣಶೆಟ್ಟಿ ಉರಫ್ ಪಾಪಯ್ಯಶೆಟ್ಟಿ, ಮೃತಪಟ್ಟ ಸದರೀ ಸುಬ್ಬಾಯಶೆಟ್ಟರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ತೊಣನೂರು ಸ್ಥಳದ ರಾಮಕೃಷ್ಣಶೆಟ್ಟರು, ಸದರಿ ವಾಸಸ್ಥರಾಗಿ ಮೃತಪಟ್ಟ ಸುಬ್ಬಾಯಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ (1,449) ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ಆಕ್ಟ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಕೃಷ್ಣಶೆಟ್ಟರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಾಯಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 260.

ಮೃತಪಟ್ಟ ವೆಂಕಟ್ಯಾವೈಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಹೊಳೆನರಶೀಪುರದ ಕಸಬಾದಲ್ಲಿರುವ ಮೃತಪಟ್ಟ ಪ್ಲೀಡರ್ ವೆಂಕಟ್ಯಾವೈಯ್ಯಂಗಾರ್ರ ಮಕ್ಕಳು 1ನೇ ಶ್ರೀನಿವಾಸರಾಘವ, 2ನೇ ಕೃಷ್ಣ, ಮೈನರ್ ಗಾರ್ಡಿಯರ್ ತಾಯಿ ಶೇತಮ್ಮ, ಮೃತಪಟ್ಟ ಸದರೀ ವೆಂಕಟ್ಯಾವೈಯ್ಯಂಗಾರ್ರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಳೆನರಶೀಪುರ ಸ್ಥಳದ ವಾಸಸ್ಥರಾಗಿ ಮೃತಪಟ್ಟ ವೆಂಕಟ್ಯಾವೈಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ (586) ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ 7ನೇ ಆಕ್ಟ್ಯ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೇತಮ್ಮನವರ ಅರ್ಜಿಯನ್ನು 1903ನೇ ಇಸವಿ ಮೇ ತಿಂಗಳು 29ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟ್ಯಾವೈಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಾಗಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ಮಿ|| ಅರ್ಜೀ ನಂಬರ್ 159.

ಅರ್ಜೀದಾರರು 1ನೇ ಶೇಷಮ್ಮ, 2ನೇ ಅಡ್ವೋಕೇಟ್ ಶೇತಾರಾಮಯ್ಯನವರು ಶಿವಮೊಗ್ಗಾ ವಾಸಸ್ಥರು ಮೈನರಾದ, 1ನೇ ಲಕ್ಷ್ಮಿದೇವಮ್ಮ, 2ನೇ ಲಕ್ಷ್ಮಣರಾವ್, 3ನೇ ಹುಚ್ಚಕ್ಕ, 4ನೇ ಅನಂತೈಯ್ಯ ಶಿವಮೊಗ್ಗ ಸ್ಥಳದ ವಾಸಿ ಛವತಿ ಪುಟ್ಟಪ್ಪನವರ ಮಕ್ಕಳು ಲೇಟ್ 1ನೇ ಗ್ರೇಡ್ ಪ್ಲೀಡರ್ ಪುಟ್ಟಪ್ಪನವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೇ ಲಕ್ಷ್ಮಿದೇವಮ್ಮ, 2ನೇ ಲಕ್ಷ್ಮಣರಾವ್, 3ನೇ ಹುಚ್ಚಕ್ಕ, 4ನೇ ಅನಂತೈಯ್ಯ ಶಿವಮೊಗ್ಗ ವಾಸಿಗಳು 1ನೇ ಅರ್ಜೀದಾರಳು ಖಾಸ ತಾಯಿಯಾಗಬೇಕು. 2ನೇ ಅರ್ಜೀದಾರನು ದೊಡ್ಡಪ್ಪನು ಆಗಬೇಕೆಂಬ ಹಕ್ಕಿನ ಮೇಲೆ ಶಿವಮೊಗ್ಗಾ ಸ್ಥಳದ 1ನೇ ಶೇಷಮ್ಮ, 2ನೇ ಅಡ್ವೋಕೇಟ್ ಶೇತಾರಾಮೈಯ್ಯನವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಗಾರ್ಡಿಯರ್ ಸರ್ಟಿಫಿಕೇಟ್ ಬಗ್ಗೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ ೧೯೦೩ನೇ ಇಸವಿ ಮಾರ್ಚಿ ತಾರೀಖು 27ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಅರ್ಜೀ ನಂಬರ್ 166.

ಮೃತಪಟ್ಟ ಶಿವಮೊಗ್ಗೆಯಲ್ಲಿದ್ದ ವೆಂಕಟರಮಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೇ ಶಂಕರಪ್ಪ ಬಿ ವೆಂಕಟರಮಣಯ್ಯ, 2ನೇ ಈತನ ತಮ್ಮ ಕೃಷ್ಣಪ್ಪ ಮೈನರ್, ಗಾರ್ಡಿಯರ್ 1ನೇ ಅರ್ಜೀದಾರ ಶಿವಮೊಗ್ಗಾ ವಾಸಿ, ಮೃತಪಟ್ಟ ಸದರೀ ವೆಂಕಟರಮಣಯ್ಯನಿಗೆ 1–2ನೇ ಅರ್ಜೀದಾರರು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ 1ನೇ ಶಂಕರಪ್ಪ, 2ನೇ ಕೃಷ್ಣಪ್ಪನವರು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 569—15—6 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ರೆಗ್ಯುಲೇಷನ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ಶಂಕರಪ್ಪ, 2ನೇ ಇವನ ತಮ್ಮ ಕೃಷ್ಣಪ್ಪನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ ೧೯೦೨—೧೯೦೩ನೇ ಇಸವಿ ಮಿ|| ಅರ್ಜೀ ನಂಬರ್ 169.

ಮೃತಪಟ್ಟ ತೀರ್ಥಹಳ್ಳಿಯಲ್ಲಿದ್ದ ಹೋತನಕಟ್ಟೆ ಶ್ರೀನಿವಾಸಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ತೀರ್ಥಹಳ್ಳಿ ವಾಸಿ ಅಚ್ಚಮ್ಮ ಯಾನೆ ಲಕ್ಷ್ಮೀಬಾಯಿ ಶ್ರೀನಿವಾಸಾಚಾರ್ ಛವತಿ ಮೃತಪಟ್ಟ ಸದರೀ ಹೋತನಕಟ್ಟೆ ಶ್ರೀನಿವಾಸಾಚಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಸ್ಥಳದ ಅಚ್ಚಮ್ಮ ಯಾನೇ ಲಕ್ಷ್ಮೀಬಾಯಿಯವರು ತೀರ್ಥಹಳ್ಳಿ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ 1,600—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರು ರೆಗ್ಯುಲೇಷನ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಚ್ಚಮ್ಮ ಯಾನೇ ಲಕ್ಷ್ಮೀಬಾಯಿಯವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಗಿರಿರಾವ್,
ಶಿರಿಸ್ತೇದಾರ್.

ಮೈಸೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ್ ೧೯೦೨—೧೯೦೩ನೇ ಇಸವಿ ಮಿ|| ಅರ್ಜೀ ನಂಬರ್ 354.

ಮೃತಪಟ್ಟ ಜೊಸಪಟ್ಟೆ ಸುಬ್ಬಣ್ಣನೆಂಬಾತನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ದೊಡ್ಡಪೇಟೇಲಿರುವ ಬಸವ್ವ, ಮೃತಪಟ್ಟ ಸದರೀ ಸುಬ್ಬಣ್ಣನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಸುಬ್ಬಂಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಸವ್ವನ ಅರ್ಜಿಯನ್ನು ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ಯ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 370.

ಮೃತಪಟ್ಟ ನಂಜುಂಡಯ್ಯ ಮತ್ತು ರಾಚಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮೈಸೂರು ಲಷ್ಕರ್ ಮೊಹಲ್ಲಾದಲ್ಲಿರುವ ಗಂಗಣ್ಣನ ಮಗ ಪುಟ್ಟಯ್ಯ, ಮೃತಪಟ್ಟ ಸದರೀ ನಂಜುಂಡಯ್ಯ ಮತ್ತು ರಾಚಮ್ಮನಿಗೆ ಮುಖ್ಯ ಬಾಧ್ಯಸ್ತ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಮೇಲ್ಕಂಡವರ ಜಿಂದಿಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ಮಾಡುವದಕ್ಕೆ ಸ್ಯ 1901ನೇ ಇಸವಿ VIIನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಯ್ಯನ ಅರ್ಜಿಯನ್ನು ಸ್ಯ 1903ನೇ ಇಸವಿ ಮಾರ್ಚಿ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೇಲ್ಕಂಡವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1903ನೇ ಇಸವಿ ಮಾರ್ಚಿ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇಧೆ.

ಸ್ಯ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 377.

ಮೃತಪಟ್ಟ ನರಸುಹ್ಮರಾಜು ಎಂಬಾತನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮೈಸೂರು ಸುಂಣದ ಕೇರಿಲಿರುವ ಗೌರಮ್ಮ ಎಂಬವಳು, ಮೃತಪಟ್ಟ ಸದರೀ ನರಸುಹ್ಮ ರಾಜುವಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರಲ್ಲಿ ವಾಸಸ್ಥರಾಗಿ ಮೃತಪಟ್ಟ ನರಸುಹ್ಮರಾಜು ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೇ ಇಸವಿ VIIನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗೌರಮ್ಮನ ಅರ್ಜಿಯನ್ನು ಸ್ಯ 1903ನೇ ಇಸವಿ ಮಾರ್ಚಿ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸುಹ್ಮರಾಜು ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1903ನೇ ಇಸವಿ ಮಾರ್ಚಿ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ಯ 1902—03ನೇ ಇಸವಿ ಮಿ॥ ಅರ್ಜಿ ನಂಬರ್ 392.

ಮೃತಪಟ್ಟ ಶ್ರೀಕಂಠಯ್ಯನವರ ಆಸ್ತೀ ವಿಷಯದಲ್ಲಿ —

ಅರ್ಜೀದಾರರು ಮೈಸೂರು ಕೃಷ್ಣರಾಜವಿಳಾಸ ಅಗ್ರಹಾರದಲ್ಲಿರುವ 1ನೇ ಲಕ್ಷ್ಮಮ್ಮ, 2ನೇ ನಂಜಮ್ಮ, 3ನೇ ಸಾವಿತ್ರಮ್ಮ, ಗಾರ್ಡಿಯರ್ ಸುಬ್ಬಮ್ಮನೆಂಬವರು, ಮೃತಪಟ್ಟ ಸದರೀ ಶ್ರೀಕಂಠೈಯ್ಯನವರಿಗೆ ಸದರಿ ಅರ್ಜಿದಾರ್ರು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಶ್ರೀಕಂಠೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೇ ಇಸವಿ VIIನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ಯ 1903ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀಕಂಠೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1903ನೇ ಇಸವಿ ಮಾರ್ಚಿ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ಯ 1902-1903ನೇ ಇಸವಿ ಮಿ॥ ಅರ್ಜೀ ನಂಬರ್ 394.

ಮೃತಪಟ್ಟ ಸರಗೂರು ರಾಮಸ್ವಾಮ್ಯೆಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಅರವಿಂದಮ್ಮ ಮೈನರ್ ಗಾರ್ಡಿಯರ್ ಎಸ್. ರಂಗಸಾಮಿ ಐಯ್ಯಂಗಾರ್ರು, ಮೃತಪಟ್ಟ ಸದರೀ ರಾಮಸ್ವಾಮ್ಯೆಯ್ಯಂಗಾರ್ರಿಗೆ ಸದರಿ ಅರವಿಂದಮ್ಮ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಣದಲ್ಲಿ ವಾಸಸ್ಥರಾಗಿ ಮೃತಪಟ್ಟ ರಾಮಸ್ವಾಮ್ಯೆಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೇ ಇಸವಿ VIIನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅರವಿಂದಮ್ಮನ ಅರ್ಜಿಯನ್ನು ಸ್ಯ 1903ನೇ ಇಸವಿ ಮಾರ್ಚಿ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಸ್ವಾಮ್ಯೆಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿಕ.

ಸ್ಯ 1903ನೇ ಇಸವಿ ಮಾರ್ಚಿ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨—೧೯೦೩ನೇ ಇಸವಿ ಮಿ॥ ಅರ್ಜಿ ನಂಬರ್ 401.

ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತಿ ವಿಷಯದಲ್ಲಿ—

ಅರ್ಜಿದಾರು, ಚಾಮರಾಜನಗರ ತ॥ ಆಲೂರಲ್ಲಿರುವ ಶ್ರೀನಿವಾಸ್ಯೆಯ್ಯಂಗಾರ್ ಮೈನರ್, ಗಾರ್ಡಿಯನ್ ಶ್ರೀನಿವಾಸ್ಯೆಯ್ಯಂಗಾರು, ಮೃತಪಟ್ಟ ಸದರೀ ಕೃಷ್ಣಯ್ಯಂಗಾರ್ರಿಗೆ ಸದರಿ ಶ್ರೀನಿವಾಸ್ಯೆಯ್ಯಂಗಾರು ಮಗ ಆಗಬೇಕೆಂಬ ಹಕ್ಕುದಾರಿಯೇಲೆ ಡಿಟೋ ಸ್ಥಳದ ವಾಸಸ್ಥರಾಗಿ ಮೃತಪಟ್ಟ ಕೃಷ್ಣಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸ್ಯೆಯ್ಯಂಗಾರ್ರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಏಪ್ರಿಲ್ ತಿಂಗಳು 7ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನನ್ಮ್ಯ ದಸ್ತಖತ್ತೊಡನೆ ಕೊಡೋಣಾಗಿ ಇಧೆ.

ಸ್ ೧೯೦೨—೧೯೦೩ನೇ ಇಸವಿ ಮಿ॥ ಅರ್ಜಿ ನಂಬರ್ 411.

ಮೃತಪಟ್ಟ ವೆಂಕಟಶೆಟ್ಟರ ಆಸ್ತಿ ವಿಷಯದಲ್ಲಿ—

ಅರ್ಜಿದಾರರು ಮೈಸೂರು ಮುಂಡಿ ಮೊಹಲ್ಲಾದಲ್ಲಿರುವ ಪಾಂಡುರಂಗ ಶೆಟ್ಟ, ಮೃತಪಟ್ಟ ಸದರೀ ವೆಂಕಟಶೆಟ್ಟರಿಗೆ ಅವ್ರ ರನಪ್ತುತ್ರನು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ವೆಂಕಟಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪಾಂಡುರಂಗ ಶೆಟ್ಟರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಶೆಟ್ಟರ ಆಸ್ತಿಗೆ ಹಕ್ಕುದಾರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನನ್ಮ್ಯ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨—೧೯೦೩ನೇ ಇಸವಿ ಮಿ॥ ಅರ್ಜಿ ನಂಬರ್ 412.

ಮೃತಪಟ್ಟ ಹೆಡ್ ಮುನಷಿ ಶಾಮರಾಯರ ಆಸ್ತಿ ವಿಷಯದಲ್ಲಿ—

ಅರ್ಜಿದಾರು 1ನೇ ರಾಮು, 2ನೇ ಶ್ರೀನಿವಾಸಮೂರ್ತಿ, ಮೈನರ್ಗಳು, ಗಾರ್ಡಿಯನ್ ತಾಯಿ ಮೈಸೂರು ಕೊತ್ವಾಲ ರಾಮು ಪ್ಪನವರ ಬೀದಿಲಿರುವ ಲಕ್ಷ್ಮಮ್ಮ ಎಂಬವರು ಮೃತಪಟ್ಟ ಸದರೀ ಶಾಮರಾಯರಿಗೆ ಸದರಿ ಅರ್ಜಿದಾರು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಖಾಯಂ ವಾಸಸ್ಥಳವಿಲ್ಲದೆ ದೊಡ್ಡ ಬಳ್ಳಾಪುರದಲ್ಲಿ ಮೃತಪಟ್ಟ ಶಾಮರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ಯಾಮ ರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನನ್ಮ್ಯ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨—೧೯೦೩ನೇ ಇಸವಿ ಮಿ॥ ಅರ್ಜಿ ನಂಬರ್ 417.

ಮೃತಪಟ್ಟ ನೆಲಮಾಕನಹಳ್ಳಿ ಶಾಮಂಣನ ಮಗ ಸುಬ್ಬಣ್ಣನ ಆಸ್ತಿ ವಿಷಯದಲ್ಲಿ—

ಅರ್ಜಿದಾರರು ಮಳವಳ್ಳಿಯಲ್ಲಿರುವ ನರಸಮ್ಮ, ಮೈನರ್ ಗಾರ್ಡಿಯನ್ ನಂಜುಂಡೈಯ್ಯ, ಮೃತಪಟ್ಟ ಸದರೀ ಸುಬ್ಬಣ್ಣ ನಿಗೆ ಅರ್ಜಿದಾರ್ ನರಸಮ್ಮ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮಳವಳ್ಳಿ ಕಸಬಾದಲ್ಲಿ ವಾಸಸ್ಥರಾಗಿ ಮೃತಪಟ್ಟ ಸುಬ್ಬಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದಾರಖಾಸ್ತುದಾರರಾದ ನರಸಮ್ಮನವರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನನ್ಮ್ಯ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨—೧೯೦೩ನೇ ಇಸವಿ ವಿ|| ನಂಬರ್ 418.

ಮೃತಪಟ್ಟ ಶ್ರೀಕಂಠೈಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ದೇವರಾಜ ಮೊಹಲ್ಲಾ ಆಸ್ಪತ್ರೆ ಬಳೀಇರುವ ಶಿಂಗಾರಮ್ಮ, ಮೃತಪಟ್ಟ ಸದರೀ ಶ್ರೀಕಂಠೈಯ್ಯನಿಗೆ ಕೂಡವಳಿ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಶ್ರೀಕಂಠೈಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ಆಕ್ಟ್ಪು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿಂಗಾರಮ್ಮನ ಅರ್ಜಿಯನ್ನು ಸ್ ೧೯೦೩ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 7ರಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀಕಂಠೈಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ ೧೯೦೨–೧೯೦೩ನೇ ಇಸವಿ ವಿ|| ಅರ್ಜಿ ನಂಬರ್ 419.

ಮೃತಪಟ್ಟ ಮಧ್ವರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಕೋಟೆಲಿರುವ ತಿರುಸಂದ್ರದ ಶೇಷಗಿರಿರಾಯರ ಮಕ್ಕಳು ನಾರಾಯಣರಾಯರು, ಮೃತಪಟ್ಟ ಸದರೀ ಮಧ್ವರಾಯರಿಗೆ ಅವಿಭಕ್ತ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಮಧ್ವರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೧೯೦೧ನೇ ಇಸವಿ VIIನೇ ಆಕ್ಟ್ಪು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣರಾಯರ ಅರ್ಜಿಯನ್ನು ಸ್ ೧೯೦೩ನೇ ಇಸವಿ ಏಪ್ರೆಲ್ ತಾರೀಖು 6ರಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಧ್ವರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೇ ಇಸವಿ ಮಾರ್ಚಿ ತಾರೀಖು 12ರಲ್ಲಿ ಕೋರ್ಟು ಮೊಹರ್ ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವರದರಾಜಯ್ಯಂಗಾರ್, ಸಬ್ ಜಡ್ಜ್.

ನೋಟಿಸ್.

ಸಿವಿಲ್ ಪ್ರೊಸೀಡರು ಕೋಡು 30ನೇ ಸೆಕ್ಷನ್ಮೇರೆ.

ಮೈಸೂರು ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟಿನಲ್ಲಿ.

೧೯೦೨—೧೯೦೩ನೇ ಇಸವಿ ಸಿವಿಲ್ ವ್ಯಾಜ್ಯದ ನಂಬರು 125.

ವಾದಿ.	ಪ್ರತಿವಾದಿ.
ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದೀಲಿ ಇರುವ ವ್ಯಾಪಾರ ಕಸಬಿನ ಕರಿಯಂಣಾ.	1ನೇ ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದೀಲಿ ಇರುವ ನೆಕ್ಕದ ಅಂಗಡೀ ದಾವೂದುಸಾಬಿ. 2ನೇ ಸದರೀ ಸ್ಥಳದಲ್ಲಿ ಇರುವ ಅಕ್ಕಿ ಅಂಗಡಿ ಬುರ್ಡಸಾಬಿ. 3ನೇ ಸದರೀ ಸ್ಥಳದಲ್ಲಿ ಇರುವ ನೆಕ್ಕದ ಅಂಗಡಿ ದಾದೂಮಿಯ್ಯಾ.

ಇದರಿಂದ ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದಿಯಲ್ಲಿ ಇರುವ ಮುಸಲ್ಮಾನರ ಜಾತಿ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೆಳ್ಳಂಡೆ ಸಿವಿಲ್ ನಂಬರಿನಲ್ಲಿ ಈ ಕೆಳಗೆ ವಿವರಿಸುವ ಷೆಡ್ಯೂಲಿನಲ್ಲಿ ಕಂಡ ಮನೆಗೆ ವಾದಿಯು ದಾವಾ ತಂದು ಇರುವದ್ದರಿಂದ ಈ ದಾವಾಕ್ಕೆ ಕಕ್ಷಿಗಾರರಾಗಿ ಶೇರತಕ್ಕ ಇಷ್ಟವುಳ್ಳವರು ೧೯೦೩ನೇ ಇಸವಿ ಮೊರ್ಚಿ ತಿಂಗಳು 18ನೇ ತಾರೀಖು ಬುಧವಾರ ದಿವಿ 11 ಘಂಟೆಗೆ ಈ ಕೋರ್ಟು ರೂಬರೂಬು ಹಾಜರಾಗಿ ತನ್ಮತಮ್ಮ ಹಕ್ಕು ಬಾಧ್ಯತೆಯನ್ನು ಸ್ಥಾಪಿಸಿಕೊಳ್ಳತಕ್ಕದ್ದಿಧೆ.

ಬ ತಾರೀಖು 28ನೇ ಫೆಬ್ರವರಿ 1903ನೇ ಇಸವಿ.

ಷೆಡ್ಯೂಲ್.

ಮೈಸೂರು ಮಂಡಿ ಮೊಹಲ್ಲಾ ನಕ್ಷೆಬಂದು ಬೀದಿಯಲ್ಲಿ ಇರುವ ಪೂರ್ವಕ್ಕೆ—ರತ್ನಶಿಂಗಯವರ ಅಂಗಡಿ ಮತ್ತು ಮಾಯಂಣನ ಮನೆ. ಪಶ್ಚಿಮಕ್ಕೆ—ಕರಿಯಂಣನ ಅಂಗಡೀ ಹಿತ್ತಲೂ ಸಹ. ದಕ್ಷಿಣಕ್ಕೆ—ರೋಡು. ಉತ್ತರಕ್ಕೆ—ಗರಡೀ ಪಾಳುಜಾಗಾ ಈ ಮಧ್ಯೆ ಇರುವ ಮೊಟ್ಟೆ ಮನೆ. ಪೂರ್ವಪಶ್ಚಿಮ ಗಜಾ 5½, ದಕ್ಷಿಣೋತ್ತರ ಗಜಾ 7 ಅಡಿ 2 ಗೋಡೆ ಸಹಾ ವುಳ್ಳದ್ದು ಮತ್ತು ಇದಕ್ಕೆ ಸಂಬಂಧಪಟ್ಟ ಚರಸ್ವತ್ತು ಸಹಾ.

ಆನಂದರಾವ್ ಸಿರಸಿ,
ಪ್ರಿನ್ಸಿಪಲ್ ಮುನ್ಸೀಫ್.

ಗೌರ್ನಮೆಂಟ್ ಸೆಕ್ಯುರಿಟಿ ಬುಕ್ ಡಿಪೋ.

ನೋಟಿಸ್. ಬೆಂಗಳೂರು, ತಾರೀಖು 7ನೇ ಫೆಬ್ರವರಿ 1903.

1903ನೇ ಇಸವಿ ಲೋವರ್ ಸೆಕಂಡರೀ ಪರೀಕ್ಷೆಗೆ ನೇಮಕವಾಗಿರುವ ಹೊಸ ಪದ್ಯಸಾರವು (Iನೇ ಭಾಗ) ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತೆ. ಅವರ ಖರೀದಿ ಪ್ರತಿ 1ಕ್ಕೆ 5 ಆಣೆಗಳು.

ಎಸ್. ಅಬ್ದುಲ್ ಹೈ, ಕ್ಯೂರೇಟರ್.